ಎಂ ವಿ ಸಿ ನಂಃ 620/2023
ಪಿ. ಡಬ್ಲ್ಯೂ-1

**(ಇಂದು ದಿನಾಂಕ 06-05-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ಎದುರುದಾರರ ಪರ ಶ್ರೀ ವಿ ಬಿ ಡಿ ವಕೀಲರಿಂದ**

ನಾನು ವೃತ್ತಿಯಿಂದ ಉದ್ಯಮಿ ಆಗಿದ್ದು ಆ ಪ್ರಕಾರ ಫ್ಯಾಕ್ಟರಿ ನಡೆಸುತ್ತಿದ್ದೇನೆ . ಕಳೆದ 15-16 ವರ್ಷಗಳಿಂದ ಪ್ಲಾಸ್ಟಿಕ್ ಪುಡಿ ಮಾಡುವ ಫ್ಯಾಕ್ಟರಿ ನಡೆಸುತ್ತಿದ್ದೇನೆ . ಈ ಕುರಿತು ನಾನು ನಿಗದಿ ಗ್ರಾಮ ಪಂಚಾಯತ್ ನಿಂದ ಪರವಾನಿಗೆ ಪಡೆದಿದ್ದೇನೆ . ಪರವಾನಿಗೆಯನ್ನು ಪ್ರತಿ ವರ್ಷ ನವೀಕರಿಸಲಾಗುತ್ತದೆ . ನಿಪಿ-4 ನ್ನು ಪಡೆದ ನಂತರ ಅದರ ನಂತರದ ವರ್ಷಗಳ ಕುರಿತು ಅಂದರೆ 2015 ರಿಂದ 2023 ವರೆಗೆ ನಾನು ಪರವಾನಿಗೆ ಪಡೆದಿಲ್ಲ ಎಂದರೆ ಸರಿ .

ನನ್ನಲ್ಲಿ ಮೂರು ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಮುಂದೆ ಹಾಜರುಪಡಿಸುತ್ತೇನೆ . ನಾನು ಸ್ಕ್ರ್ಯಾಪ್ ಪ್ಲಾಸ್ಟಿಕ ಖರೀದಿಸಿದ ಬಗ್ಗೆ ಮತ್ತು ಹಣ ಪಾವತಿಸಿದ ಕುರಿತಾದ ದಾಖಲೆಗಳನ್ನು ಈ ಹಂತದವರೆಗೆ ಹಾಜರುಪಡಿಸಿಲ್ಲ ಎಂದರೆ ಸರಿ .

ನಾನು ಕಟ್ಟಿರುವ ಫ್ಯಾಕ್ಟರಿಯ ಮೇಲು ಹೊದಿಕೆ ತಗಡಿನದಾಗಿದ್ದು ಎಂದರೆ ಸಾಕ್ಷಿಯು ಸೀಮೆಂಟ್ ಶೀಟಿನದಾಗಿರುತ್ತದೆ ಎಂದು ಹೇಳುತ್ತಾರೆ . ಪೊಲೀಸರು ತಮ್ಮ ವರದಿಯಲ್ಲಿ ಉಲ್ಲೇಖಿಸಿರುವ ನನ್ನ ಫ್ಯಾಕ್ಟರಿಯ ಕಂಪೌಂಡ ತಗಡಿನದ್ದು ಮತ್ತು ಹೊದಿಕೆ ತಗಡಿನ ಶೀಟುಗಳದ್ದು ಎಂದು ಉಲ್ಲೇಖಿಸಿರುವುದು ಸರಿ ಇರುವುದಿಲ್ಲ. ನಿಪಿ-3 ರಲ್ಲಿ ಕಂಡು ಬರುವಂತೆ ಕಟ್ಟಡಕ್ಕೆ ಪಿಲ್ಲರ್ ಅಳವಡಿಸಿರುವುದು ಕಂಡು ಬರುವುದಿಲ್ಲ ಎಂದರೆ ಸರಿ.

ನನ್ನ ಫ್ಯಾಕ್ಟರಿ ಬಳಿ ರಸ್ತೆ ತಿರುವಿನಿಂದ ಕೂಡಿದೆ ಎಂದರೆ ಸರಿ . ಕೆ ಎಸ್ ಆರ್ ಟಿ ಸಿ ಬಸ್ಸು ನಮ್ಮ ಶೆಡ್ಡಿನ ಮುಂದಿನ ಭಾಗಕ್ಕೆ ಮಾತ್ರ ಜಕಂಗೊಳಿಸಿದೆ ಎಂದರೆ ಸರಿಯಲ್ಲ . ಆದ್ದರಿಂದ ನಿಪಿ-3 ರಲ್ಲಿ ಶೆಡ್ಡಿನ ಮುಂದಿನ ಭಾಗ ಜಕಂ ಆಗಿರುವುದು ಮಾತ್ರ ಕಂಡು ಬರುತ್ತದೆ ಎಂದರೆ ಸರಿಯಲ್ಲ .

ದಿಃ 07.05.2023 ಕ್ಕೆ ಕೊನೆಗೊಳ್ಳುವಂತೆ ನಾನು ಹೇಳುವ ನನ್ನ ಫ್ಯಾಕ್ಟರಿಯಲ್ಲಿ ಯಾವ ಯಾವ ಸ್ವರೂಪದ ಎಷ್ಟು ಪ್ರಮಾಣದ ವಸ್ತುಗಳು ಇದ್ದವು ಎನ್ನುವ ಬಗ್ಗೆ ನಮ್ಮಲ್ಲಿ ದಾಖಲೆ ಇರುತ್ತದೆ

ಎಂದರೆ ಸರಿ ಅಪಘಾತದ ಪರಿಣಾಮ ಎಷ್ಟು ಪ್ರಮಾಣದ ವಸ್ತುಗಳು ಹಾನಿಯಾಗಿವೆ ಮತ್ತು ಅದಕ್ಕೆ ಪೂರಕವಾಗಿ ಎಷ್ಟು ನಷ್ಟವಾಗಿದೆ ಎಂದು ತೋರಿಸುವ ದಾಖಲೆಗಳನ್ನು ಈ ಹಂತದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ .

ನಿಪಿ-7 ನ್ನು ಕೊಟ್ಟಿರುವ ಇಂಜಿನಿಯರ್ ಖಾಸಗಿಯವರು ಎಂದರೆ ಸರಿ . ನಿಪಿ-7 ಹೊಸದಾಗಿ ಒಂದು ಕಟ್ಟಡ ರಚನೆಯಾಗುವಲ್ಲಿ ಸಹಕಾರಿಯಾಗುವಂತೆ ಸಿದ್ಧಪಡಿಸಿರುವ ಒಂದು ಅಂದಾಜು ಪಟ್ಟಿ ಎಂದರೆ ಸರಿ . ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಿಪಿ-7 ನ್ನು ಸೃಷ್ಟಿ ಮಾಡಿ ತಂದು ಹಾಜರುಪಡಿಸಿ ಅದಕ್ಕೆ ಪೂರಕವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ನನ್ನ ಮಾಸಿಕ ವರಮಾನ / ಆದಾಯವನ್ನು ತೋರಿಸುವ ದಾಖಲೆ ಈ ಅರ್ಜಿಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ . ಅಪಘಾತದ ಪರಿಣಾಮ ನಾನು 5 ತಿಂಗಳ ಕಾಲ ನನ್ನ ಫ್ಯಾಕ್ಟರಿಯನ್ನು ಮುಚ್ಚುವ ಪ್ರಮೇಯ ಉಂಟಾಯಿತು ಮತ್ತು ರೂ.5 ಲಕ್ಷ ರೂಪಾಯಿ ನಷ್ಟ ಉಂಟಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಹಾನಿಯಾಗಿರುವ ಕಟ್ಟಡವನ್ನು ದುರಸ್ತಿ ಮಾಡಲು ಅಥವಾ ಪುನರ್ ರಚಿಸಲು ರೂ. 50 ಲಕ್ಷ ರೂಪಾಯಿ ಹಣ ಬೇಕಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಅಪಘಾತವಾದಾಗ ಸಮಯ ಬೆಃ 6.45 ಆಗಿತ್ತು ಎಂದರೆ ಸರಿ . ಬಸ್ಸಿನ ಯಾಂತ್ರಿಕ ದೋಷದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ . ನಾನು ಈ ಅರ್ಜಿಯಲ್ಲಿ ಹಾಜರುಪಡಿಸಿರುವ ದಾಖಲೆಗಳು ನಾನು ಸೃಷ್ಟಿ ಮಾಡಿರುವ ದಾಖಲೆಗಳಾಗಿದ್ದು ನಾನು ಹೇಳುವಂತೆ ನನಗೆ ಯಾವುದೇ ರೀತಿಯ ನಷ್ಟ ಉಂಟಾಗಿಲ್ಲ ಆದರೆ ಅಲ್ಪ ಪ್ರಮಾಣ ನಷ್ಟ ಆಗಿದೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.